aglasem.com

FOR KARNATAKA CLASS 10 PREPARATION

Karnataka SSLC Model Question Paper 2027 for Social Science (Paper 3, Kannada Medium)

EXAM	YEAR	TYPE	SUBJECT
Karnataka Class 10	2027	Sample Paper	Social Science

85-K

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003

KARNATAKA SCHOOL EXAMINATION AND ASSESSMENT BOARD

6th Cross, Malleshwaram, Bengaluru – 560 003

2026–27 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 3

S.S.L.C. MODEL QUESTION PAPER - 3 : 2026–27

ವಿಷಯ : ಸಮಾಜವಿಜ್ಞಾನ

Subject : SOCIAL SCIENCE

ವಿಷಯ ಸಂಕೇತ : 85-K **Subject Code : 85-K**

ಸಮಯ : 3 ಗಂಟೆ 15 ನಿಮಿಷಗಳು] [Time : 3 Hours 15 Minutes

ಗರಿಷ್ಠ ಅಂಕಗಳು : 80] [Max. Marks : 80

ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.

2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

3. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[Turn over

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ / ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದು ಮಾತ್ರ ಸರಿಯಾಗಿದೆ ಅಥವಾ ಹೆಚ್ಚು ಸೂಕ್ತವಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಪೂರ್ಣ ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ. 8x1=8

1. ಬ್ರಿಟಿಷ್ ಭೂಕಂದಾಯ ನೀತಿಗಳಿಂದಾಗಿ "ಭಾರತದ ರೈತರು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸತ್ತರು" ಎಂಬ ಹೇಳಿಕೆಯನ್ನು ನೀಡಿದವರು

A) ಕಾರ್ನ್‌ವಾಲೀಸ್

B) ಮೆಕಾಲೆ

C) ಚಾರ್ಲ್ಸ್ ಮೆಟಕಾಫ್

D) ಎಡ್ಮಂಡ್ ಬರ್ಕ್

2. ರಾಜಕುಮಾರ ಆರ್ಕ್ ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡನ ಹತ್ಯೆಯು ಮೊದಲನೇ ವಿಶ್ವಯುದ್ಧಕ್ಕೆ ಕಾರಣವಾಯಿತು. ಆ ರಾಜಕುಮಾರನು

A) ಸರ್ಬಿಯಾದವನು

B) ಆಸ್ಟ್ರಿಯಾದವನು

C) ಬಲ್ಗೇರಿಯಾದವನು

D) ಆಸ್ಟ್ರೇಲಿಯಾದವನು

3. ಅಂತರರಾಷ್ಟ್ರೀಯ ನ್ಯಾಯಾಲಯದ ಮುಖ್ಯ ಕಛೇರಿ ಇರುವುದು

A) ಹೇಗ್ ಪಟ್ಟಣದಲ್ಲಿ

B) ಜಿನೇವಾದಲ್ಲಿ

C) ವಾಷಿಂಗ್ಟನ್‌ನಲ್ಲಿ

D) ನ್ಯೂಯಾರ್ಕ್‌ನಲ್ಲಿ

4. ಮೂಕನಾಯಕ ಪತ್ರಿಕೆಯನ್ನು ಪ್ರಾರಂಭಿಸಿದವರು

A) ಡಾ. ಶಿವರಾಮ ಕಾರಂತರು

B) ಡಾ. ಬಿ. ಆರ್. ಅಂಬೇಡ್ಕರ್‌ರವರು

C) ಆನಿಬೆಸೆಂಟರು

D) ಮಹಾತ್ಮ ಜ್ಯೋತಿಬಾ ಫುಲೆಯವರು

5. ಭಾರತದ ಪೂರ್ವ ಕರಾವಳಿಯಲ್ಲಿ ಸ್ಥಿತಗೊಂಡಿರುವ ಬಂದರು

A) ಕಾಂಡ್ಲಾ

B) ಕೊಚಿ

C) ಮುಂಬೈ

D) ಪಾರಾದೀಪ್

6. ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯು ಮೂಲಕೈಗಾರಿಕೆ ಎಂದು ಕರೆಯಲ್ಪಡುತ್ತದೆ. ಏಕೆಂದರೆ,

A) ಇದರ ಇತಿಹಾಸವು ಇತರೇ ಕೈಗಾರಿಕೆಗಳಿಗಿಂತ ಸುದೀರ್ಘವಾದುದು

B) ಇದು ಬಾಕ್ಸೈಟ್‌ನ ಲಭ್ಯತೆಯನ್ನು ಅವಲಂಬಿಸಿದೆ

C) ಇದು ಹಲವಾರು ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಒದಗಿಸುತ್ತದೆ

D) ಇದು ಜ್ಞಾನ ಆಧಾರಿತ ಕೈಗಾರಿಕೆಯಾಗಿದೆ

7. ಕೇಂದ್ರ ಸರ್ಕಾರದ ಆಯವ್ಯಯವನ್ನು ಲೋಕಸಭೆಯಲ್ಲಿ ಮಂಡಿಸುವವರು

A) ಮುಖ್ಯ ಮಂತ್ರಿ

B) ಪ್ರಧಾನ ಮಂತ್ರಿ

C) ರಾಜ್ಯ ಹಣಕಾಸು ಸಚಿವರು

D) ಕೇಂದ್ರ ಹಣಕಾಸು ಸಚಿವರು

8. ಭಾರತ ಸರ್ಕಾರವು ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿದ್ದು

A) 1942ರಲ್ಲಿ

B) 1945ರಲ್ಲಿ

C) 1978ರಲ್ಲಿ

D) 1984ರಲ್ಲಿ

II. ಈ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿ: **8x1=8**

9. ಪುಟ್ಟಬಸಪ್ಪನ ಯಾವ ಕಾರ್ಯವು ಆತನ ಜನಪ್ರಿಯತೆಯನ್ನು ಹೆಚ್ಚಿಸಿತು?

10. ಮುಸೋಲಿನಿಯು ಸ್ಥಾಪಿಸಿದ ರಾಜಕೀಯ ಪಕ್ಷವನ್ನು ಹೆಸರಿಸಿ.

11. ವಿಶ್ವಸಂಸ್ಥೆಯ ಸಚಿವ ಸಂಪುಟ ಎಂದು ಕರೆಯಲ್ಪಡುವ ಅದರ ಅಂಗಸಂಸ್ಥೆ ಯಾವುದು?

12. ಸಾಮಾಜಿಕ ಸ್ಥರವಿನ್ಯಾಸ ಎಂದರೇನು?

13. ಕರ್ನಾಟಕದಲ್ಲಿ ಜೀತಪದ್ಧತಿಯನ್ನು ಯಾರು ರದ್ದುಗೊಳಿಸಿದರು?

14. ಭಾರತವು ಯಾವ ಪ್ರಕಾರದ ವಾಯುಗುಣವನ್ನು ಹೊಂದಿದೆ?

15. 'ಭಾರತದ ನೈಜ ಅಭಿವೃದ್ಧಿ ಎಂದರೆ ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು ಯಾರು?

16. ಶ್ರೇಯಸ್‌ನು ಬ್ಯಾಂಕಿನಲ್ಲಿ ಒಂದು ಖಾತೆಯನ್ನು ಹೊಂದಿದ್ದಾನೆ. ಬ್ಯಾಂಕು ಆತನ ಠೇವಣಿಗೆ ಬಡ್ಡಿಯನ್ನು ಕೊಡುವುದಿಲ್ಲ ಆದರೆ ಸೇವಾಶುಲ್ಕವನ್ನು ವಿಧಿಸುತ್ತದೆ. ಹಾಗಾದರೆ ಆತನು ಹೊಂದಿರುವ ಬ್ಯಾಂಕ್ ಖಾತೆ ಯಾವುದು?

III. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎರಡರಿಂದ ನಾಲ್ಕು ವಾಕ್ಯ/ಅಂಶಗಳಲ್ಲಿ ಉತ್ತರಿಸಿ: **8x2=16**

17. ರಾಜ್ಯ ಲೋಕಸೇವಾ ಆಯೋಗದ ಕಾರ್ಯಗಳನ್ನು ವಿವರಿಸಿ.

ಅಥವಾ

ವಿಶ್ವಸಂಸ್ಥೆಯ ಧ್ಯೇಯೋದ್ದೇಶಗಳನ್ನು ವಿವರಿಸಿ.

18. ಬಾಲಕಾರ್ಮಿಕತೆಗೆ ಕಾರಣಗಳು ಯಾವುವು?

ಅಥವಾ

ತಾರತಮ್ಯದಿಂದ ಉಂಟಾದ ಪೂರ್ವಾಗ್ರಹದ ಋಣಾತ್ಮಕ ಪರಿಣಾಮಗಳಾವುವು?

19. ಮೊದಲನೇ ಆಂಗ್ಲೋ–ಮರಾಠ ಯುದ್ಧಕ್ಕೆ ಕಾರಣಗಳನ್ನು ವಿವರಿಸಿ.

20. ಪಾಂಡಿಚೇರಿ ವಿಮೋಚನಾ ಚಳವಳಿಯ ಕುರಿತು ಬರೆಯಿರಿ.

21. ಬಾವಿ ನೀರಾವರಿಯು ಅತ್ಯಂತ ಪ್ರಮುಖವಾದ ನೀರಾವರಿ ಪದ್ಧತಿಯಾಗಿದೆ, ಸ್ಪಷ್ಟೀಕರಿಸಿ.

22. ಭತ್ತ ಹಾಗೂ ಗೋಧಿ ಬೇಸಾಯಕ್ಕೆ ಬೇಕಾಗುವ ಭೌಗೋಳಿಕ ಅಂಶಗಳ ನಡುವಿನ ವ್ಯತ್ಯಾಸಗಳನ್ನು ಪಟ್ಟಿಮಾಡಿ.

23. ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳನ್ನು ವಿವರಿಸಿ.

24. ಗ್ರಾಹಕರನ್ನು ಹೇಗೆ ಶೋಷಿಸಲಾಗುತ್ತಿದೆ?

IV. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಆರು ವಾಕ್ಯ/ಅಂಶಗಳಲ್ಲಿ ಉತ್ತರಿಸಿ: **9x3=27**

25. ಪ್ಲಾಸಿ ಕದನದ ಕಾರಣ ಮತ್ತು ಪರಿಣಾಮಗಳಾವುವು?

ಅಥವಾ

ಭಾರತದಲ್ಲಿ ಬ್ರಿಟಿಷ್ ಭೂಕಂದಾಯ ವ್ಯವಸ್ಥೆಯು ಬೀರಿದ ಪರಿಣಾಮಗಳಾವುವು?

26. ನಿತ್ಯಹರಿದ್ವರ್ಣ ಅರಣ್ಯಗಳು, ಎಲೆ ಉದುರಿಸುವ ಮಾನ್ಸೂನ್ ಅರಣ್ಯಗಳಿಗಿಂತ ಹೇಗೆ ಭಿನ್ನವಾಗಿವೆ?

ಅಥವಾ

ಗ್ಲೋಬಲ್ ಪೊಜಿಶನಿಂಗ್ ಸಿಸ್ಟಂ ಹೇಗೆ ಉಪಯೋಗಕಾರಿಯಾಗಿದೆ?

27. ಗ್ರಾಮೀಣ ಅಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರವನ್ನು ವಿವರಿಸಿ.

ಅಥವಾ

' ವೈಯಕ್ತಿಕ ಹಣಕಾಸು ಹಾಗೂ ಸಾರ್ವಜನಿಕ ಹಣಕಾಸುಗಳ ನಡುವಿನ ವ್ಯತ್ಯಾಸಗಳನ್ನು ವಿವರಿಸಿ

28. ಬ್ಯಾಂಕ್ ಖಾತೆಯನ್ನು ತೆರೆಯುವುದರಿಂದ ಆಗುವ ಅನುಕೂಲಗಳನ್ನು ವಿಶ್ಲೇಷಿಸಿ.

ಅಥವಾ

ಉದ್ಯಮಿಗಳು ಕೈಗೊಳ್ಳುವ ಕಾರ್ಯಗಳನ್ನು ವಿಶ್ಲೇಷಿಸಿ.

29. ಭಾರತೀಯ ಸಮಾಜವನ್ನು ಸುಧಾರಿಸುವಲ್ಲಿ ದಯಾನಂದ ಸರಸ್ವತಿಯವರ ಪಾತ್ರವು ಸದಾ ಸ್ಮರಣೀಯವಾದುದು, ಸಮರ್ಥಿಸಿ.

30. 1857ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಹಲವಾರು ಕಾರಣಗಳಿಂದ ವಿಫಲವಾಯಿತು. ಸ್ಪಷ್ಟೀಕರಿಸಿ.

31, ಶಸ್ತ್ರಾಸ್ತ್ರ ಪೈಪೋಟಿಯ ಪರಿಣಾಮಗಳನ್ನು ವಿವರಿಸಿ.

32. ಸಂಘಟಿತ ಹಾಗೂ ಅಸಂಘಟಿತ ವಲಯದ ಕೆಲಸಗಾರರ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

33. ಭೂಕಂಪದಿಂದ ಉಂಟಾಗುವ ಪರಿಣಾಮಗಳನ್ನು ವಿವರಿಸಿ.

V. ಈ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಎಂಟು ವಾಕ್ಯ/ಅಂಶಗಳಲ್ಲಿ ಉತ್ತರಿಸಿ: **4x4=16**

34. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳು ಅನುಸರಿಸಿದ ವಿಧಾನಗಳನ್ನು ವಿವರಿಸಿ.

ಅಥವಾ

ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಯಲ್ಲಿ ರಾಜಾ ರಾಮ್‌ಮೋಹನ್ ರಾಯರ ಪಾತ್ರವನ್ನು ವಿವರಿಸಿ.

35. ಕಪ್ಪು ಮಣ್ಣಿನ ಗುಣಲಕ್ಷಣಗಳನ್ನು ಪಟ್ಟಿಮಾಡಿ.

ಅಥವಾ

ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳ ಸ್ಥಾನೀಕರಣವನ್ನು ಪ್ರಭಾವಿಸುವ ಅಂಶಗಳನ್ನು ಪಟ್ಟಿಮಾಡಿ.

36. ಮೂರನೇ ಆಂಗ್ಲೋ ಮೈಸೂರು ಯುದ್ಧದ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ.

37. ಭ್ರಷ್ಟಾಚಾರವು ಹಲವಾರು ಋಣಾತ್ಮಕ ಪರಿಣಾಮಗಳಿಗೆ ಕಾರಣವಾಗುತ್ತದೆ. ಹೇಗೆ?

VI. 38. **ನಿಮಗೆ ಒದಗಿಸಿರುವ ಭಾರತದ ನಕ್ಷೆಯಲ್ಲಿ ಇವುಗಳಲ್ಲಿ ಯಾವುದಾದರೂ ಐದನ್ನು ಗುರುತಿಸಿ.** **5x1=5**

A. ಮಲಬಾರ್ ತೀರ

B. 23^0 30^1 ಉತ್ತರ ಅಕ್ಷಾಂಶ

C. ಸೂರತ್

D. ದಾಮೋದರ್ ಯೋಜನೆ

E. ನರೋರ

F. ಕಾಂಡ್ಲ

G. ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ

H. ರೂಯ್ಲಿ

I. ಸೇಲಂ

J. ಕೊಯ್ನ

ದೃಷ್ಟಿವಿಕಲ ಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ.

(ಪ್ರಶ್ನೆ ಸಂಖ್ಯೆ 38ರ ಬದಲಿಗೆ)

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳು ಪ್ರಮುಖ ಉದ್ದೇಶಗಳಾವುವು?

ಅಥವಾ

ಹಿಮಾಲಯ ಪರ್ವತಗಳಿಂದಾಗುವ ಅನುಕೂಲಗಳಾವುವು?